ದಿನಾಂಕಃ 21-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ- ವಾದಿ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ.**

7 ನೇ ಪ್ರತಿವಾದಿ ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಅವರದು ವಿವಾಹವಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಅವರ ವಿವಾಹಕ್ಕೆ ಹೋಗಿಲ್ಲ. ನನ್ನ ಪಡಿತರ ಚೀಟಿ ಇದ್ದು, ಈಗ ಅದು ರದ್ದಾಗಿರುತ್ತದೆ. ಅದು ಯಾರ ಯಾರ ಹೆಸರಿನಲ್ಲಿ ಇತ್ತು ಎಂದು ನೆನಪಿಲ್ಲ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈಗ ಸಾಕ್ಷಿಗೆ ಚನ್ನಬಸವ್ವ ಇವರ ಕುಟುಂಬ ಪಡಿತರ ಚೀಟಿ ತೋರಿಸುತ್ತಿದ್ದು ಅದನ್ನು ಸಾಕ್ಷಿ ಒಪ್ಪಿಕೊಳ್ಳುತ್ತಾರೆ. ಅದರಲ್ಲಿ 1 ನೇ ಪ್ರತಿವಾದಿ ಮತ್ತು 7 ನೇ ಪ್ರತಿವಾದಿ ಹಾಗೂ ತಮ್ಮ ಹೆಸರು ಇರುವ ಕುರಿತು ಒಪ್ಪಿಕೊಳ್ಳುತ್ತಾರೆ. ಸದರಿ ಕಾಗದ ಪತ್ರವನ್ನು ನಿಪಿ-19 ಎಂದು ಗುರುತಿಸಲಾಯಿತು. ನಿಪಿ-19 ನ್ನು ಒಟ್ಟು ಕುಟುಂಬಕ್ಕೆ ನೀಡಿರುತ್ತಾರೆ ಎಂದರೆ ಸರಿ. ನಿಪಿ-19 ರದ್ದು ಆಗಿರುವುದಾಗಿ ಹೇಳುತ್ತಿದ್ದು, ಅದು ಯಾವಾಗ ರದ್ದಾಗಿರುತ್ತದೆ ಎಂದು ಗೊತ್ತಿಲ್ಲ. ಪ್ರತಿವಾದಿ ನಂ.2 ಮತ್ತು 3 ಇವರ ಹೆಸರಿಗೆ ಸಹ ಪಡಿತರ ಚೀಟಿ ಇರುತ್ತದೆ ಎಂದರೆ ಸರಿ. ನಾವು ಒಟ್ಟು ಕುಟುಂಬದವರು ಇದ್ದರೂ ಸಹ ನಾನೊಂದು, ನನ್ನ ಅಣ್ಣ ಒಂದು ಪಡಿತರ ಚೀಟಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿ ತಮ್ಮ ಇರುವಿಕೆಯ ಕುರಿತು ಗುರುತಿಸಲು ಸೂಚಿಸಿದ್ದು ಸಾಕ್ಷಿ ಪೋಟೋವನ್ನು ಒಪ್ಪಿಕೊಳ್ಳುತ್ತಾರೆ. ಪೋಟೋವನ್ನು ನಿಪಿ-20 ಎಂದು ಗುರುತಿಸಲಾಯಿತು. ಸದರಿ ಪೋಟೋ ಸಂಬಂಧಿಕರ ಮದುವೆಯದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ತಮ್ಮ ಇರುವಿಕೆಯ ಕುರಿತು ಗುರುತಿಸಲು ಸೂಚಿಸಿದ್ದು ಸಾಕ್ಷಿ ಪೋಟೋದಲ್ಲಿ ತಮ್ಮ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಪೋಟೋವನ್ನು ನಿಪಿ-21 ಎಂದು ಗುರುತಿಸಲಾಯಿತು. ನಿಪಿ-21 ರಲ್ಲಿ 7 ನೇ ಪ್ರತಿವಾದಿಯನ್ನು ಸಾಕ್ಷಿ ಗುರುತಿಸುತ್ತಿಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ತಮ್ಮ ಇರುವಿಕೆಯ ಕುರಿತು ಗುರುತಿಸಲು ಸೂಚಿಸಿದ್ದು ಸಾಕ್ಷಿ

ಪೋಟೋದಲ್ಲಿ ತಮ್ಮ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಪೋಟೋವನ್ನು ನಿಪಿ-22 ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋದಲ್ಲಿರುವ 7 ನೇ ಪ್ರತಿವಾದಿಯನ್ನು ಗುರುತಿಸುತ್ತಿಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ತಮ್ಮ ಇರುವಿಕೆಯ ಕುರಿತು ಗುರುತಿಸಲು ಸೂಚಿಸಿದ್ದು ಸಾಕ್ಷಿ ಪೋಟೋದಲ್ಲಿ ತಮ್ಮ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಪೋಟೋವನ್ನು ನಿಪಿ-23 ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಪೋಟೋದಲ್ಲಿರುವ 7 ನೇ ಪ್ರತಿವಾದಿಯನ್ನು ಗುರುತಿಸುತ್ತಿಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿ ತಮ್ಮ ಇರುವಿಕೆಯ ಕುರಿತು ಗುರುತಿಸಲು ಸೂಚಿಸಿದ್ದು ಸಾಕ್ಷಿ ಪೋಟೋದಲ್ಲಿ ತಮ್ಮ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಪೋಟೋವನ್ನು ನಿಪಿ-24 ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಪೋಟೋದಲ್ಲಿರುವ 7 ನೇ ಪ್ರತಿವಾದಿಯನ್ನು ಗುರುತಿಸುತ್ತಿಲ್ಲ. ನಿಪಿ-20 ರಿಂದ 24 ಭಾವಚಿತ್ರಗಳು 7 ನೇ ಪ್ರತಿವಾದಿಯ ಜಗದೀಶ ಕ್ಲಿನಿಕ್ ಇದರ ವಾಸ್ತು ಶಾಂತಿಯ ಪೋಟೋಗಳು ಎಂದರೆ ಸರಿಯಲ್ಲ. ಮನೆ ವಾಸ್ತು ಶಾಂತಿ ಮಾಡುವಾಗ ಶೆಟ್ಟೆಪ್ಪ ಕಳ್ಳಿಮನಿ ಇವರ ಹೆಸರನ್ನು ಸಹ ಅಚ್ಚು ಹಾಕಲಾಗಿತ್ತು ಎಂದರೆ ಸರಿಯಲ್ಲ.

2. 6 ನೇ ಪ್ರತಿವಾದಿಯು ನನ್ನನ್ನು ಚಿಕ್ಕವನು ಇದ್ದಾಗಿನಿಂದ ಜೋಪಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರು ನನ್ನನ್ನು ವಿಶೇಷವಾದ ಪ್ರೀತಿ, ವಾತ್ಸಲ್ಯದಿಂದ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಆದ್ದರಿಂದಲೇ ಅವರದು, ನನ್ನ ತಂದೆಯದು ಮತ್ತು ನನ್ನ ಹೆಸರು ಪಡಿತರ ಚೀಟಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಜಮೀನು ಮಾರಿ ಬಂದ ಹಣವನ್ನು ನನಗೆ ನೀಡಿದ್ದರಿಂದ ನಾನು ಸವಣೂರಿನಲ್ಲಿ 2 ಗುಂಟೆ ಜಾಗ ಖರೀದಿ ಹಿಡಿದಿರುತ್ತೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಕ್ಲಿನಿಕ್ ಮಾಡಿಕೊಳ್ಳಲು ಸದರಿ ಜಾಗೆಯಲ್ಲಿ ನಾನು ಮತ್ತು ನನ್ನ ತಂದೆ ಕಟ್ಟಡ ಕಟ್ಟಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಅಲ್ಲಿಯೇ 2 ವರ್ಷ ಕ್ಲಿನಿಕ್ ನಡೆಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ, ಪ್ರತಿವಾದಿ ನಂ.6 ಮತ್ತು 7 ಇವರನ್ನು ಮನೆಯಿಂದ ಹೊರಹಾಕಿ ಆ ಮನೆಯಲ್ಲಿ ನಾನು

ವಾಸವಿರುತ್ತೇನೆ ಎಂದರೆ ಸರಿಯಲ್ಲ. ಹೆಣ್ಣುಮಗಳನ್ನು ಧಾರೆ ಎರೆದು ತಂದೆ ಮತ್ತು ಆ ಮಗಳ ಚಿಕ್ಕಪ್ಪಂದಿರು ಕೊಡುತ್ತಾರೆ ಎಂದರೆ ಸರಿ. ಆ ಪ್ರಕಾರ 7 ನೇ ಪ್ರತಿವಾದಿಯನ್ನು 1 ನೇ ವಾದಿ ಧಾರೆ ಎರೆದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಮದುವೆಯ ಸಂದರ್ಭದಲ್ಲಿ 2 ನೇ ವಾದಿ ಬೀಗರ ವಸ್ತ್ರಗಳನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯ ಬಗ್ಗೆ ಎಲ್ಲಾ ಗೊತ್ತಿದ್ದರೂ ನಾನು ಆಸ್ತಿ ನೀಡಬೇಕಾಗುತ್ತದೆ ಎಂದು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿ 1977 ಕ್ಕಿಂತಲೂ ಹಿಂದೆ ಯಾರ ಹೆಸರಿನಲ್ಲಿ ಇತ್ತು ಎಂದು ಹೇಳಲು ಬರುವುದಿಲ್ಲ. 1977-78 ರಲ್ಲಿ ಸರ್ವೇ ನಂ.41/1 ಎ ಇದು ಬಸವಣ್ಣೆಪ್ಪ ಶೆಟ್ಟೆಪ್ಪ ಕಳ್ಳಿಮನಿ ಹಾಗೂ ಬಸಲಿಂಗಪ್ಪ ಶೆಟ್ಟೆಪ್ಪ ಕಳ್ಳಿಮನಿ ಇವರ ಹೆಸರಿನಲ್ಲಿ ಸಂಯುಕ್ತವಾಗಿ 09 ಎಕರೆ 26 ಗುಂಟೆ ಇತ್ತು ಎಂದರೆ ಗೊತ್ತಿಲ್ಲ. ಅದು ಅವರಿಗೆ ಭೂ ನ್ಯಾಯ ಮಂಡಳಿಯಿಂದ ಬಂದ ಆಸ್ತಿ ಎಂದರೆ ಸುಳ್ಳು. ಸದರಿ ಜಮೀನು ಹಿಂದೆ ವಲಿಮುಲಾಶಾ ಗೌಸಮೋದಿನ ನಿಜಾಮುದ್ದಿನ ತಂದೆ ಬಾಹುದ್ದೀನ ಖಾದ್ರಿ ಇವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಬಸವಣ್ಣೆಪ್ಪ ಮತ್ತು ಬಸಲಿಂಗಪ್ಪ ಇವರ ತಂದೆಯ ಹೆಸರು ಶೆಟ್ಟೆಪ್ಪ ಇರುತ್ತದೆ. ನನ್ನ ಅಜ್ಜನ ಹೆಸರನ್ನು ನನ್ನ ತಂದೆಗೆ ಇಡಲಾಗಿರುತ್ತದೆ ಎಂದರೆ ಸರಿ. 1981 ರಲ್ಲಿ ಬಸವಣ್ಣೆಪ್ಪ ಮತ್ತು ಬಸಲಿಂಗಪ್ಪ ಇವರನ್ನು ಸದರಿ ಆಸ್ತಿಗೆ ಖಾಯಂ ಕುಳ ಅಂತಾ ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. ಆಗ ಅವರು ರೂ.1,000/- ಸಾಲವನ್ನು ಸದರಿ ಜಮೀನಿನ ಮೇಲೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಂತರ ಬಸವಣ್ಣೆಪ್ಪ ಇವರ ಹೆಸರು ಕಡಿಮೆಯಾಗಿ 04 ಎಕರೆ 32 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ.

ಅಸಲು ದಾವಾ ನಂ. 84/2024
ಡಿ. ಡಬ್ಲು-2

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).